ವರದಿಯ ವಿವರವಾದ ಅಧ್ಯಯನ ಹಾಗೂ ಆಳವಾದ ಪರಿಶೀಲನೆಗಾಗಿ ಕಾನೂನು ಹಾಗೂ ತಾಂತ್ರಿಕ ಪರಿಣಿತರುಗಳನ್ನೊಳಗೊಂಡ ಒಂದು ಸಮಿತಿಯನ್ನು ದಿನಾಂಕ: 01-01-2011ರ ಸರ್ಕಾರದ ಆದೇಶದಲ್ಲಿ ರಚಿಸಲಾಗಿದೆ.

11. ನ್ಯಾಯ ಮಂಡಳಿಯ ವರದಿಯ ಮೇಲೆ ಕಾನೂನು ಹಾಗೂ ತಾಂತ್ರಿಕ ಪರಿಣಿತರುಗಳು ನೀಡುವ ವರದಿಯಲ್ಲಿನ ಶಿಫಾರಸ್ಸುಗಳನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಅವುಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಉಭಯ ಸದನಗಳ ನಾಯಕರುಗಳೊಂದಿಗೆ ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿನ ಸಭೆಯಲ್ಲಿ ಚರ್ಚಿಸಿ, ಸಭೆಯಲ್ಲಿ ತೆಗೆದುಕೊಳ್ಳುವ ತೀರ್ಮಾನದಂತೆ ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

12. ಸ್ಕೀಂ-ಎ ಅಡಿಯಲ್ಲಿನ 734 ಟಿ.ಎಂ.ಸಿ. ನೀರು ಹಾಗೂ ಹೆಚ್ಚುವರಿ ನೀರಿನ ಹಂಚಿಕೆಯಲ್ಲಿ ದೊರಕಿರುವ 177 ಟಿ.ಎಂ.ಸಿ. ನೀರನ್ನು ಸೇರಿಸಿ ಕರ್ನಾಟಕಕ್ಕೆ ಲಭ್ಯವಾಗುವ 911 ಟಿ.ಎಂ.ಸಿ. ನೀರನ್ನು ಪರಿಣಾಮಕಾರಿಯಾಗಿ ಬಳಸಲು ಅವಶ್ಯವಿರುವ ಎಲ್ಲಾ ತಾಂತ್ರಿಕ ಮತ್ತು ಆಡಳಿತಾತ್ಮಕ ಕ್ರಮಗಳನ್ನು ತೆಗೆದುಕೊಂಡು ತ್ವರಿತವಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು.

13. ನ್ಯಾಯಾಧಿಕರಣದ 4 ಸಂಪುಟ ಹೊಂದಿರುವ ಪೂರ್ಣ ಪ್ರಮಾಣದ ಐತೀರ್ಪಿನ ಪ್ರತಿಯನ್ನು ಎಲ್ಲಾ ಗೌರವಾನ್ವಿತ ಸದಸ್ಯರುಗಳಿಗೂ ಒದಗಿಸಲಾಗುವುದು.

11. ಹಕ್ಕುಚ್ಯುತಿ ಮಂಡನೆಗೆ ಅನುಮತಿ ಕೋರಿಕೆ:

ವಿಷಯ: ಲೋಕಸಭಾ ಸದಸ್ಯರಾದ ಶ್ರೀ ಹೆಚ್. ವಿಶ್ವನಾಥ್ ರವರ ಮೇಲಿನ ಹಕ್ಕುಚ್ಯುತಿ ಮಂಡನೆ ಕುರಿತು.

ಶ್ರೀ ಎಂ. ಪಿ. ಅಪ್ಪಚ್ಚು ರಂಜನ್ (ಮಡಿಕೇರಿ): ಮಾನ್ಯ ಅಧ್ಯಕ್ಷರೆ, ದಿ: 11-01-2011 ರಂದು 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ನಮ್ಮ ಮೈಸೂರು-ಕೊಡಗು ಲೋಕಸಭಾ ಸದಸ್ಯರಾದ ಸನ್ಮಾನ್ಯ ವಿಶ್ವನಾಥ್‌ರವರು ಈ ಸರ್ಕಾರದ ಬಗ್ಗೆ ಮತ್ತು ವಿಧಾನ ಸಭಾ ಅಧ್ಯಕ್ಷರ ಮೇಲೆ ಒಂದು ರೀತಿಯಲ್ಲಿ ನಮ್ಮ ಸದನದ ಗೌರವಕ್ಕೆ ಮತ್ತು ಘನತೆಗೆ ಚ್ಯುತಿ ಬರುವ ರೀತಿಯಲ್ಲಿ ಮಾತನಾಡಿರುತ್ತಾರೆ. ಅವರು ಮಾತನಾಡುವ ಸಂದರ್ಭದಲ್ಲಿ

'ಅಯೋಗ್ಯ ಸರ್ಕಾರ ಹಾಗೂ ಅವಿವೇಕಿ ವಿಧಾನಸಭಾ ಅಧ್ಯಕ್ಷರು, ಹಠಮಾರಿತನದಿಂದ ಹೀಗಾಗಿದೆ' ಎಂದು ಹೇಳುವ ವಿಚಾರವನ್ನು ಹೇಳಿದ್ದಾರೆ. ಇದರಿಂದ ನಮ್ಮ ಅಧ್ಯಕ್ಷರ ಸ್ಥಾನದ ಘನತೆ–ಗೌರವಕ್ಕೂ ಕೂಡ ಧಕ್ಕೆ ಬರುವಂಥದ್ದಾಗುತ್ತದೆ. ಇವತ್ತು ತಾವು ಅಧ್ಯಕ್ಷರಾಗಿರಬಹುದು. ಈ ವಿಧಾನಸಭೆಯ ಅಧ್ಯಕ್ಷರಾಗಿ ಹಲವಾರು ಜನ ಬಹಳಷ್ಟು ಹೆಸರುವಾಸಿ ಆದಂಥದ್ದು ಇದೆ. ಯಾವುದೇ ಸಂದರ್ಭದಲ್ಲಿ ಯಾರೇ ಅಧ್ಯಕ್ಷರಾಗಲಿ, ಅವರು ಯಾವುದೇ ಪಕ್ಷದವರಾಗಲಿ, Speaker ರವರ ಘನತೆ ಗೌರವವನ್ನು ಕಾಪಾಡುವಂತೆ ಕೆಲಸವಾಗ ಬೇಕಾಗುತ್ತದೆ. ತಮ್ಮ ಪೀಠದಲ್ಲಿ ಕುಳಿತಂಥ ಸಂದರ್ಭದಲ್ಲಿ ಅವರು ಯಾವುದೇ ಪಕ್ಷದಿಂದ ಗೆದ್ದು ಬಂದರೂ ಕೂಡ ಅವರು ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡುವಂಥದ್ದು, ಸದನದ ಎಲ್ಲಾ ಸದಸ್ಯರನ್ನು ಒಂದು ರೀತಿಯಲ್ಲಿ ಜೋಡಿಸಿಕೊಂಡು ಹೋಗುವಂಥ ವ್ಯವಸ್ಥೆ ಇದ್ದಂಥ ಸಂದರ್ಭದಲ್ಲಿ ಸದನದ ವಿಧಾನಸಭಾಧ್ಯಕ್ಷರಿಗೆ ಒಂದು ರೀತಿಯಲ್ಲಿ ಅಪಮಾನ ಮಾಡುವ ರೀತಿಯಲ್ಲಿ ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ. ತಾವು ಇದನ್ನು ಸೂಕ್ಷ್ಮವಾಗಿ ಪರಿಶೀಲನೆ ಮಾಡಿ, ಇದನ್ನು ಮುಂದಕ್ಕೆ ಲೋಕಸಭೆಗೆ with recommendation ಕಳುಹಿಸುವಂಥ ವ್ಯವಸ್ಥೆಯಾಗಬೇಕು. ಈ ರೀತಿ ನಡೆದುಕೊಳ್ಳುವುದು ಸರಿಯಲ್ಲ. ಘನತೆಗೆ, ಗೌರವಕ್ಕೆ ಧಕ್ಕೆಯಾಗಿದೆ, ಹಕ್ಕುಚ್ಯುತಿಯಾಗಿದೆ, ಆ ರೀತಿಯಲ್ಲಿ ಇದನ್ನು ತಾವು ಕಳುಹಿಸಿಕೊಡಬೇಕೆಂದು ವಿನಂತಿಸುತ್ತೇನೆ.

ಶ್ರೀ ಸುರೇಶ್ ಕುಮಾರ್ ಎಸ್. (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲಮಂಡಲಿ ಸಚಿವರು): ಮಾನ್ಯ ಅಧ್ಯಕ್ಷರೆ ಗೌರವಾನ್ವಿತ ಸದಸ್ಯರಾದ ಶ್ರೀ ಎಂ. ಪಿ. ಅಪ್ಪಚ್ಚುರಂಜನ್ ರವರು ಹಕ್ಕುಚ್ಯುತಿಯ ವಿಷಯವನ್ನು ಸದನದಲ್ಲಿ ಪ್ರಸ್ತಾಪಿಸುತ್ತಿದ್ದಾರೆ. ಇದೇ ರೀತಿಯ ಹಕ್ಕುಚ್ಯುತಿಯ ಪ್ರಸ್ತಾಪ ನಿನ್ನೆ ಕೂಡ ಸದನದಲ್ಲಿ ಬಂದಿತ್ತು. ಹಾಗೆ ಹೇಳಿದಂತೆ, 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ಶ್ರೀ ಹೆಚ್. ವಿಶ್ವನಾಥ್ ರವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆನ್ನುವುದರ ಮೇಲೆ ಸದನದ ಘನತೆಗೆ ಚ್ಯುತಿ ಬಂದಿದೆ, ಸಭಾಧ್ಯಕ್ಷರ ಘನತೆಗೆ ಚ್ಯುತಿ ಬಂದಿದೆ ಎನ್ನುವಂತೆ ಇವತ್ತು ಅಪ್ಪಚ್ಚುರಂಜನ್‌ರವರು

ಹೇಳುತ್ತಿದ್ದಾರೆ. ಶ್ರೀ ಹೆಚ್. ವಿಶ್ವನಾಥ್ ರವರು ಲೋಕಸಭಾ ಸದಸ್ಯರಾಗಿರುವುದರಿಂದ ಈ ವಿಷಯವನ್ನೂ ಕೂಡ ತಾವು ಲೋಕಸಭಾ ಅಧ್ಯಕ್ಷರಿಗೆ ಈ ವಿಚಾರವನ್ನು, ಈ ಪ್ರಸ್ತಾಪವನ್ನು ಪರಿಶೀಲನೆ ಮಾಡಿದ ನಂತರ ಕಳುಹಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈ ಸೂಚನೆಯನ್ನು ಪರಶೀಲಿಸಿ ಮುಂದಿನ ಕ್ರಮ ಕೈಗೊಳ್ಳುತ್ತೇನೆ.

12. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ:

ವಿಷಯ: ಬೀದಿ ನಾಯಿಗಳ ಹಾವಳಿಯಿಂದ ಮಗುವಿನ ಸಾವು ಕುರಿತು

ಶ್ರೀ ಎನ್. ಎಸ್. ನಂದೀಶ್ ರೆಡ್ಡಿ (ಕೆ. ಆರ್. ಪುರ): ಮಾನ್ಯ ಅಧ್ಯಕ್ಷರೆ, ದಿ:12-01-2011 ರಂದು ಅಂದರೆ ನಿನ್ನೆ 'ಸಂಜೆವಾಣಿ' ಪತ್ರಿಕೆಯಲ್ಲಿ ಪ್ರಕಟವಾಗಿರುವ ಸುದ್ದಿ ಪ್ರಕಾರ ಬೀದಿ ನಾಯಿಗಳ ಹಾವಳಿ ಬೆಂಗಳೂರು ನಗರದಲ್ಲಿ ಹೆಚ್ಚಾಗಿದೆ. ಒಂದು ಮಗುವನ್ನು ನಾಯಿ ಎತ್ತಿಕೊಂಡು ಹೋಗಿ ತಿಂದು, ಆ ಮಗುವಿನ ಪ್ರಾಣವನ್ನು ತೆಗೆದಿರುವ ಸುದ್ದಿ 'ಸಂಜೆವಾಣಿ' ಪತ್ರಿಕೆಯಲ್ಲಿ ಮತ್ತು ಇವತ್ತಿನ ಎಲ್ಲ ಪತ್ರಿಕಗಳಲ್ಲಿ ಪ್ರಕಟವಾಗಿದೆ. ಅದಕ್ಕೆ ತಕ್ಷಣ ನಮ್ಮ ಸರ್ಕಾರದ ಕಡೆಯಿಂದ ಒಂದು ವಿಶೇಷವಾದ ರೀತಿಯಲ್ಲಿ ಕ್ರಮವನ್ನು ತೆಗೆದುಕೊಂಡು ಈ ನಾಯಿಗಳ ಹಾವಳಿಯಿಂದ ಜನರನ್ನು ತಪ್ಪಿಸಬೇಕೆಂದು ನನ್ನ ಪ್ರಾರ್ಥನೆ.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲಮಂಡಲಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ನಂದೀಶ್ ರೆಡ್ಡಿಯವರು ಏನು ಪ್ರಸ್ತಾಪಿಸಿದ್ದಾರೆ ಆ ಸುದ್ದಿ ನಿನ್ನೆ ಸಂಜೆಯ ಪತ್ರಿಕೆ ಮತ್ತು ಇಂದಿನ ದಿನಪತ್ರಿಕೆಗಳಲ್ಲಿ ವರದಿಯಾಗಿದೆ. ಇದು ಬಹಳ ಆಘಾತಕಾರಿಯಾದ ಸುದ್ದಿಯಾಗಿದೆ. ಬಹಳ ವರ್ಷಗಳಿಂದ ಈ ಬೀದಿ ನಾಯಿಗಳ ನಿಯಂತ್ರಣ ಮಾಡಬೇಕೆಂದು ಕಾರ್ಯಕ್ರಮವನ್ನೇ ಹಮ್ಮಿಕೊಂಡು BBMP ಕಾಯ್ದೆ ಮಾಡಿಕೊಂಡು ಬಂದಿದೆ. ಆದರೆ, ಹಿಂದೆ ಕೇಂದ್ರದಿಂದ ಬಂದಿರುವ ಒಂದು ಸೂಚನೆ ಮೇರೆಗೆ ಬೀದಿ ನಾಯಿಗಳನ್ನು ಕೊನೆಗೊಳಿಸುವ ಪ್ರಯತ್ನಕ್ಕೆ ಕೂಡ ನಮಗೆ ಸ್ವಲ್ಪ ಹಿಂದೇಟು ಬಿದ್ದಿದೆ. ಅದಕ್ಕೆ